# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದ ಜಿಲ್ಲಾ ಪಂಚಾಯತಿಗಳಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಾದ ಡಿ.ಆರ್.ಡಿ.ಎ. ಕಾರ್ಯಕ್ರಮದಡಿ ಹೆಚ್ಚುವರಿ ಸಿಬ್ಬಂದಿಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಯವರ ಸೇವೆಯನ್ನು ರಾಜ್ಯ ಯೋಜನೆಯಾದ ORDP ಕಾರ್ಯಕ್ರದಡಿ ತೆರವಾಗಿದ್ದ ಹುದ್ದೆಗೆ ವರ್ಗಾಯಿಸಲಾಗಿರುವುದರಿಂದ ಬಾಕಿ/ಪ್ರಸಕ್ತ ಸಾಲಿನ ವೇತನ ವೆಚ್ಚಕ್ಕಾಗಿ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ

**ಓದಲಾಗಿದೆ:**

1. ಸುತ್ತೋಲೆ ಸಂಖ್ಯೆ: ಆಇ 01 ಜಿಪಅ 2014 ದಿನಾಂಕ:1.2.2014
2. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಡತ ಸಂಖ್ಯೆ: KPRC/GPA/236/2021

**ಪ್ರಸ್ತಾವನೆ:**

ರಾಜ್ಯದ ಜಿಲ್ಲಾ ಪಂಚಾಯತಿಗಳಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಾದ ಡಿ.ಆರ್.ಡಿ.ಎ. ಕಾರ್ಯಕ್ರಮದಡಿ ಕರ್ತವ್ಯ ನಿರ್ವಹಿಸುತ್ತಿರುವ ಹೆಚ್ಚುವರಿ ಅಧಿಕಾರಿ/ಸಿಬ್ಬಂದಿಯವರುಗಳನ್ನು ರಾಜ್ಯ ಯೋಜನೆಯಾದ ಒ.ಆರ್.ಡಿ.ಪಿ. ಕಾರ್ಯಕ್ರಮದಡಿ ತೆರವಾಗಿರುವ ಹುದ್ದೆಗಳಿಗೆದುರಾಗಿ ವರ್ಗಾಯಿಸುವಂತೆ ಹಾಗೂ ಸದರಿ ಸಿಬ್ಬಂದಿಯವರ ವಿವರಗಳನ್ನು ಹೆಚ್.ಆರ್.ಎಂ.ಎಸ್. ನಲ್ಲಿ ಅಳವಡಿಸಿ ವೇತನವನ್ನು ಸೆಳೆಯುವಂತೆ ಹಾಗೂ ಡಿ.ಆರ್.ಡಿ.ಎ. ಕಾರ್ಯಕ್ರಮದಡಿ ತೆರವಾಗಿರುವ ಹುದ್ದೆಗಳನ್ನು ರದ್ದುಪಡಿಸಲು ತಿಳಿಸಲಾಗಿತ್ತು. ಅದರಂತೆ ಡಿ.ಆರ್.ಡಿ.ಎ. ಕಾರ್ಯಕ್ರಮದಡಿ 196 ಹುದ್ದೆಗಳನ್ನು ಮುಂದುವರೆಸಿ ಹೆಚ್ಚುವರಿ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 198 ಹುದ್ದೆಗಳಿಗೆ 1421.16ಲಕ್ಷಗಳನ್ನು ಪ್ರಸಕ್ತ ಸಾಲಿನ ವೇತನ ವೆಚ್ಚವನ್ನು ಭರಿಸಲು ಕಾರ್ಯಕ್ರಮ ಲೆಕ್ಕ ಶೀರ್ಷಿಕೆ 2515-00-101-10-28-005ರಡಿ ಜಿಲ್ಲಾವಾರು ಒದಗಿಸಿ ಬಿಡುಗಡೆಗೊಳಿಸುವಂತೆ ಪ್ರಸ್ತಾಪಿಸಿದೆ.

ಕೊಡಗು ಜಿಲ್ಲಾ ಪಂಚಾಯತಿಯಲ್ಲಿ ಡಿ.ಆರ್.ಡಿ.ಎ. ಕಾರ್ಯಕ್ರಮದಿಂದ ಒ.ಆರ್.ಡಿ.ಪಿ. ಕಾರ್ಯಕ್ರಮಕ್ಕೆ ವರ್ಗಾಯಿಸಲ್ಪಟ್ಟ ಕರ್ತವ್ಯನಿರತ ಅಧಿಕಾರಿ/ಸಿಬ್ಬಂದಿಯವರ ವೇತನ ವೆಚ್ಚಕ್ಕಾಗಿ ರೂ.37.76ಲಕ್ಷಗಳನ್ನು ಸರ್ಕಾರದ ಆದೇಶ ಸಂಖ್ಯೆ: ಆಇ 329 ವೆಚ್ಚ 6/2021ಇ ದಿನಾಂಕ:2.7.2021ರ ಮೂಲಕ ಬಿಡುಗಡೆಗೊಳಿಸಿರುವುದರಿಂದ ಇದನ್ನು ಹೊರತುಪಡಿಸಿ ರೂ.1383.40ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 2515-00-196-1-05-300ರಿಂದ ಬಿಡುಗಡೆಗೊಳಿಸಲು ನಿರ್ಣಯಿಸಿ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಆಇ 147 ವೆಚ್ಚ 6/2021(ಇ) ದಿನಾಂಕ: 16ನೇ ಸೆಪ್ಟೆಂಬರ್ 2021

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದ ಕಾಲಂ 2ರ ಜಿಲ್ಲಾ ಪಂಚಾಯತಿಗಳಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಾದ ಡಿ.ಆರ್.ಡಿ.ಎ. ಕಾರ್ಯಕ್ರಮದಡಿ ಹೆಚ್ಚುವರಿ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 198 ಅಧಿಕಾರಿ/ಸಿಬ್ಬಂದಿಯವರುಗಳ ಸೇವೆಯನ್ನು ರಾಜ್ಯ ಯೋಜನೇಯಾದ ಇತರೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮ (ORDP) ಕಾರ್ಯಕ್ರಮದಡಿ ತೆರವಾಗಿದ್ದ ಹುದ್ದೆಗಳಿಗೆ ವರ್ಗಾಯಿಸಲಾಗಿರುವುದರಿಂದ ಬಾಕಿ/ಪ್ರಸಕ್ತ ಸಾಲಿನ ವೇತನ ಪಾವತಿಗಾಗಿ ಕಾಲಂ 4ರ ಲೆಕ್ಕ ಶೀರ್ಷಿಕೆಯ ಕಾರ್ಯಕ್ರಮದಡಿ ಕಾಲಂ 5ರ ಲೆಕ್ಕ ಶೀರ್ಷಿಕೆಯಿಂದ ರೂ.1383.40ಲಕ್ಷ (ರೂಪಾಯಿ ಒಂದು ಸಾವಿರದ ಮೂರು ನೂರ ಎಂಬತ್ಮೂರು ಲಕ್ಷದ ನಲವತ್ತು ಸಾವಿರಗಳು ಮಾತ್ರ) ಗಳನ್ನು ಬಿಡುಗಡೆಗೊಳಿಸಿದೆ.

(ಸೂಚನೆ: ಬಿಡುಗಡೆಗೊಳಿಸಿರುವ ಅನುದಾನವನ್ನು ನಿಧಿ-2ಕ್ಕೆ ಜಮೆ ಮಾಡಿಕೊಂಡು, ನಂತರ ಸಂಬಂಧಪಟ್ಟ ಜಿಲ್ಲಾ/ತಾಲ್ಲೂಕು ಪಂಚಾಯತಿ ಮುಖ್ಯಲೆಕ್ಕಾಧಿಕಾರಿಗಳು/ಕಾರ್ಯನಿರ್ವಾಹಕ ಅಧಿಕಾರಿಗಳು ಮರು ಹೊಂದಾಣಿಕೆ ಆದೇಶವನ್ನು ಈ ಕೆಳಗಿನ ಅಧಿಕಾರಿಗಳಿಗೆ ಸುತ್ತೋಲೆರನ್ವಯ ಪ್ರಸ್ತಾವನೆ ಆರ್ಥಿಕ ಇಲಾಖೆಗೆ ಸಲ್ಲಿಸಿ ಖಜಾನೆಯಲ್ಲಿ ಅಪ್ ಲೋಡ್ ಮಾಡಿಕೊಳ್ಳುವುದು..**ಪ್ರಸ್ತಾವಿತ ಲೆಕ್ಕ ಶೀರ್ಷಿಕೆಯಡಿ ಬಾಕಿ ವೇತನವನ್ನು ಸೆಳೆಯಬೇಕಾಗಿದ್ದಲ್ಲಿ ಅದಕ್ಕೆ ಆರ್ಥಿಕ ಇಲಾಖೆ ಹೊರಡಿಸಿರುವ ಸುತ್ತೋಲೆಯ ಷರತನ್ನು ಸಡಿಲಿಸಿ ಬಾಕಿ ವೇತನವನ್ನು ಸೆಳೆಯಲು ಸಹಮತಿಸಿದೆ ಎಂದು ಭಾವಿಸತಕ್ಕದ್ದು.**

ಬಿಡುಗಡೆಗೊಳಿಸಿದ ಈ ಅನುದಾನವನ್ನು ಪ್ರಸ್ತಾಪಿತ ವೆಚ್ಚವನ್ನು ಆದ್ಯತೆಯ ಮೇಲೆ ವೆಚ್ಚ ಮಾಡತಕ್ಕದ್ದು, ಯಾವುದೇ ಹಂತದಲ್ಲಿ ಅಂದರೆ ತಾಲ್ಲೂಕು ಪಂಚಾಯತಿ ಅಥವಾ ಅನುಷ್ಠಾನಾಧಿಕಾರಿಗಳ ಹಂತದಲ್ಲಿ ವಿಳಂಬವಾಗಿ ಅನುದಾನ ವ್ಯಪಗತವಾದಲ್ಲಿ ಮತ್ತೊಮ್ಮೆ ಅನುದಾನವನ್ನು ಒದಗಿಸುವುದಿಲ್ಲವೆಂದು ಮತ್ತು ವಿಳಂಬಗೊಳಿಸಿದ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಕ್ರಮವಹಿಸಲಾಗುವುದು. ಡಿ.ಆರ್.ಡಿ.ಎ. ಕಾರ್ಯಕ್ರಮದಡಿ ತೆರವಾಗಿರುವ ಹುದ್ದೆಗಳನ್ನು ರದ್ದುಪಡಿಸಲು ಆಡಳಿತ ಇಲಾಖೆ ಪರಿಶೀಲಿಸಿ ಕ್ರಮವಹಿಸತಕ್ಕದ್ದು.

ಡಿ.ಆರ್.ಡಿ.ಎ. ಕಾರ್ಯಕ್ರಮದಡಿ ಕರ್ತವ್ಯ ನಿರ್ವಹಿಸುತ್ತಿರುವ 29 ಅಧಿಕಾರಿ/ಸಿಬ್ಬಂದಿಯವರುಗಳ ಸೇವೆಯನ್ನು ಪಂಚಾಯತ್ ರಾಜ್ ಆಯುಕ್ತಾಲಯಕ್ಕೆ ವರ್ಗಾವಣೆಗಳೊಳಿಸಲು ಪ್ರಸ್ತಾಪಿಸಿದ್ದು ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. ಒಪ್ಪಿದಲ್ಲಿ ಸದರಿಯವರುಗಳ ವೇತನವನ್ನು ರಾಜ್ಯ ವಲಯದಡಿ ವೆಚ್ಚ ಭರಿಸಬೇಕಾಗುತ್ತದೆ. ಒ.ಆರ್.ಡಿ.ಪಿ.ಗೆ ವರ್ಗಾಯಿಸಲ್ಪಟ್ಟ 198 ಹುದ್ದೆಗಳಲ್ಲಿ ಈ 29 ಹುದ್ದೆಗಳು ಒಳಗೊಂಡಿರುವುದರಿಂದ ಪ್ರಸಕ್ತ ಸಾಲಿನಲ್ಲಿ ಜಿಲ್ಲಾ ವಲಯದಿಂದ ರಾಜ್ಯ ವಲಯಕ್ಕೆ ವರ್ಗಾಯಿಸಿದಲ್ಲಿ ಈ ಆದೇಶದಲ್ಲಿ ಒದಗಿಸುತ್ತಿರುವ ಅನುದಾನ ಉಳಿಕೆಯಾಗುವುದರಿಂದ ಹಾಗೂ ರಾಜ್ಯ ವಲಯದಲ್ಲಿ ಹೆಚ್ಚುವರಿ ಅನುದಾನ ಒದಗಿಸಬೇಕಾಗುವುದರಿಂದ ಪ್ರಸಕ್ತ ಸಾಲಿಗೆ ಮಾತ್ರ ಸೀಮಿತಗೊಳಿಸಿ ಆಯುಕ್ತಾಲಯಕ್ಕೆ ವರ್ಗಾಯಿಸುವ ಅಧಿಕಾರಿ/ಸಿಬ್ಬಂದಿಯವರ ಸೇವೆಯನ್ನು ಅನ್ಯಪರ ಸೇವೆ ಎಂದು ಪರಿಗಣಿಸಲು ಮುಂದಿನ ಆರ್ಥಿಕ ವರ್ಷದಲ್ಲಿ ರಾಜ್ಯ ವಲಯಕ್ಕೆ ವರ್ಗಾಯಿಸಿಕೊಳ್ಳಲು ಹೆಚ್.ಆರ್.ಎಂ.ಎಸ್. ನಲ್ಲಿ ಅಂಕಿ ಅಂಶಗಳನ್ನು ಅಳವಡಿಸಿಕೊಳ್ಳಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕ್ರಮವಹಿಸತಕ್ಕದ್ದು.

| ಕ್ರ.ಸಂ. | ಜಿಲ್ಲಾ/ತಾಲ್ಲೂಕು ಪಂಚಾಯತ್ | ತೆರವಾದ ಹುದ್ದೆಗಳಿಗೆದುರಾಗಿ ವರ್ಗಾಯಿಸಿದ ಕರ್ತವ್ಯನಿರತ ಅಧಿಕಾರಿ/ಸಿಬ್ಬಂದಿಯವರುಗಳ ಸಂಖ್ಯೆ | ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ | ಲೆಕ್ಕ ಶೀರ್ಷಿಕೆ 2515-00-196-1-05-300ರಡಿ ಬಿಡುಗಡೆಗೊಳಿಸಿದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|---|
| 1 | 2 | 3 | 4 | 5 |
| 1 | ಬೆಂಗಳೂರು ನಗರ | 10 | 2515-00-101-0-28-005 | 103.80 |
| 2 | ಬೆಂಗಳೂರು ಗ್ರಾಮಾಂತರ | 2 | 2515-00-101-0-28-005 | 15.50 |
| 3 | ಚಿತ್ರದುರ್ಗ | 15 | 2515-00-101-0-28-005 | 75.49 |
| 4 | ಕೋಲಾರ | 3 | 2515-00-101-0-28-005 | 26.28 |
| 5 | ಶಿವಮೊಗ್ಗ | 6 | 2515-00-101-0-28-005 | 40.16 |
| 6 | ತುಮಕೂರು | 8 | 2515-00-101-0-28-005 | 90.48 |
| 7 | ಮೈಸೂರು | 10 | 2515-00-101-0-28-005 | 76.55 |
| 8 | ಚಿಕ್ಕಮಗಳೂರು | 4 | 2515-00-101-0-28-005 | 25.93 |
| 9 | ದಕ್ಷಿಣ ಕನ್ನಡ | 4 | 2515-00-101-0-28-005 | 33.74 |
| 10 | ಹಾಸನ | 5 | 2515-00-101-0-28-005 | 40.99 |
| 11 | ಮಂಡ್ಯ | 5 | 2515-00-101-0-28-005 | 33.55 |
| 12 | ಬೆಳಗಾವಿ | 7 | 2515-00-101-0-28-005 | 55.20 |
| 13 | ವಿಜಯಪುರ | 5 | 2515-00-101-0-28-005 | 42.33 |
| 14 | ಧಾರವಾಡ | 11 | 2515-00-101-0-28-005 | 67.58 |
| 15 | ಉತ್ತರ ಕನ್ನಡ | 5 | 2515-00-101-0-28-005 | 35.39 |
| 16 | ಕಲಬುರ್ಗಿ | 11 | 2515-00-101-0-28-005 | 63.55 |
| 17 | ಬಳ್ಳಾರಿ | 6 | 2515-00-101-0-28-005 | 54.51 |
| 18 | ಬೀದರ್ | 5 | 2515-00-101-0-28-005 | 30.97 |
| 19 | ರಾಯಚೂರು | 5 | 2515-00-101-0-28-005 | 36.88 |
| 20 | ಯಾದಗಿರಿ | 2 | 2515-00-101-0-28-005 | 12.53 |
| 21 | ದಾವಣಗೆರೆ | 12 | 2515-00-101-0-28-005 | 86.76 |
| 22 | ರಾಮನಗರ | 3 | 2515-00-101-0-28-005 | 20.49 |
| 23 | ಚಿಕ್ಕಬಳ್ಳಾಪುರ | 1 | 2515-00-101-0-28-005 | 5.10 |
| 24 | ಚಾಮರಾಜನಗರ | 10 | 2515-00-101-0-28-005 | 57.84 |
| 25 | ಉಡುಪಿ | 9 | 2515-00-101-0-28-005 | 54.12 |
| 26 | ಬಾಗಲಕೋಟೆ | 3 | 2515-00-101-0-28-005 | 26.46 |
| 27 | ಗದಗ್ | 3 | 2515-00-101-0-28-005 | 20.64 |
| 28 | ಹಾವೇರಿ | 8 | 2515-00-101-0-28-005 | 71.18 |
| 29 | ಕೊಪ್ಪಳ | 12 | 2515-00-101-0-28-005 | 79.40 |
| | ಒಟ್ಟು | 191 | | 1383.40 |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಶ್ರೀಕೃಷ್ಣ ಎನ್. ಬುಗಟ್ಯಾಗೋಳ)

ವಿಶೇಷಾಧಿಕಾರಿ(ಜಿ.ಪಂ.) ಹಾಗೂ ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ

ಆರ್ಥಿಕ ಇಲಾಖೆ

1. ಮಹಾಲೇಖಪಾಲರು(ಎ&ಇ) ಲೆಕ್ಕ ಪರಿಶೋಧನೆ 1 & 2, ಕರ್ನಾಟಕ, ಬೆಂಗಳೂರು

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಖಜಾನೆ-2, 7ನೇ ಮಹಡಿ, ವಾಣಿಜ್ಯ ತೆರಿಗೆ ಕಟ್ಟಡ, ಗಾಂಧಿನಗರ, ಬೆಂಗಳೂರು-2ರವರಿಗೆ
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಗ್ರಾ.ಅ.ಪ. ಇಲಾಖೆ
3. ಸಂಬಂಧಪಟ್ಟ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು,
4. ಜಂಟಿ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
5. ಸಂಬಂಧಪಟ್ಟ ಜಿಲ್ಲಾ ಖಜಾನಾಧಿಕಾರಿಗಳು,
6. ರಕ್ಷಾ ಕಡತಕ್ಕೆ
7. ಹೆಚ್ಚುವರಿ ಪ್ರತಿ